## ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 90/2017 ಸಿ.ಡಬ್ಲ್ಯೂ –10 ಪಿ.ಡಬ್ಲ್ಯೂ -06

| | | |
|---|---|---|
| ಹೆಸರು | ಃ | ಸಂತೋಷ |
| ತಂದೆಃ ಗಂಡ | ಃ | ಶ್ರೀಮಂತ ರಾಠೋಡ |
| ವಯಸ್ಸು | ಃ | ೨೯ ವರ್ಷ |
| ಉದ್ಯೋಗ | : | ಅತಿಥಿ ಶಿಕ್ಷಕರು |
| ವಾಸಸ್ಥಳ | ಃ | ಗುಳ್ಳೊಳ್ಳಿ ತಾಂಡಾ |

ದಿನಾಂಕಃ ೧೮.೦೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಮೃತ ರಮೇಶ ನನ್ನ ಸಹೋದರನಾಗಬೇಕು. ಚಾಸಾ-1 ನನ್ನ ತಂದೆ, ಚಾಸಾ-2, 3 ರವರ ಪರಿಚಯ ಇರುತ್ತದೆ. ಚಾಸಾ-4 ನನ್ನ ಮಾವ, ಚಾಸಾ-5 ನನ್ನ ದೊಡ್ಡಪ್ಪನ ಮಗ, ಚಾಸಾ-8 ನನ್ನ ಅಣ್ಣ, ಚಾಸಾ-9 ನನ್ನ ಅತ್ತಿಗೆ, ಚಾಸಾ-11 ನನ್ನ ತಾಯಿ, ಚಾಸಾ-12 ರಿಂದ 15 ರವರ ಪರಿಚಯ ಇರುತ್ತದೆ. ಚಾಸಾ-6, 7 ರವರ ಪರಿಚಯ ಇರುವುದಿಲ್ಲ.

ದಿ.06.02.2016 ರಂದು ಎಂದಿನಂತೆ ನನ್ನ ಸಹೋದರ ಮೃತ ರಮೇಶ ಪಡಸಾವಳಿ ಗ್ರಾಮಕ್ಕೆ ಕೆಲಸಕ್ಕೆ ಹೋಗಿದ್ದನು. ಬೆಳಿಗ್ಗೆ 6.00 ಗಂಟೆಗೆ ಕೆಲಸಕ್ಕೆ ಹೋಗಿ ಸಾಯಂಕಾಲ ಬರುತ್ತಿರುವಾಗ ಅಪಘಾತವಾಗಿರುತ್ತದೆ. ಸದರಿ ನನ್ನ ಸಹೋದರನ ಮೊಬೈಲದಿಂದ ಚಾಸಾ-13 ರವರು ಚಾಸಾ-1 ರವರಿಗೆ ಕರೆ ಮಾಡಿ ಅಪಘಾತದ ವಿಷಯವನ್ನು ತಿಳಿಸಿದರು. ಆಗ ಚಾಸಾ-1 ಮತ್ತು ಚಾಸಾ-2 ರವರು ಮೋಟರ ಸೈಕಲ ಮೇಲೆ ಹೋದರು, ನಂತರ ನಾನು ಚಾಸಾ-8, 9, 11, 12 ವಿಕಾಸ ಸೇರಿಕೊಂಡು ಜೀಪಿನಲ್ಲಿ ಹೋದೆವು. ಆಗ ನಮಗೆ ನನ್ನ ಸಹೋದರನನ್ನು ಅಂಬುಲೆನ್ಸ ಮೂಲಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ಗೊತ್ತಾಯಿತು. ನಂತರ ನಾವು ಆಸ್ಪತ್ರೆಗೆ ಹೋಗಿ ಮೃತ ನನ್ನ ಸಹೋದರನನ್ನು ನೋಡಿದಾಗ ಅವರ ತಲೆಗೆ, ಕೈಗೆ, ಕಾಲಿಗೆ, ಮುಖಕ್ಕೆ ತೀವ್ರಸ್ವರೂಪದ ಗಾಯಗಾಳಾಗಿದ್ದವು, ಕಣ್ಣು ಮುಚ್ಚಿದ್ದವು, ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಗುಲಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು, ಆಗ ನಾನು, ಚಾಸಾ-೧ ರವರು ಸೇರಿ ಅಂಬುಲೆನ್ಸ ಮೂಲಕ ಮೃತ ನನ್ನ ಸಹೋದರನನ್ನು ಹೆಚ್ಚಿನ ಚಿಕಿತ್ಸೆಗಾಗಿ ಗುಲಬರ್ಗಾದ ಬಸವೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಚಿಕಿತ್ಸೆ ಕೊಡಿಸೆವು ಆಗ ವೈದ್ಯರು ಇನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಗಂಗಾಮಯಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ಅಲ್ಲಿಯೂ ಸಹ ವೈದ್ಯರು ಬೇರೆ ಕಡೆಗೆ ಕರೆದುಕೊಂಡು ಹೋಗಿ ಎಂಧು ಹೇಳಿದರು, ಆಗ ನಾವು ಹೈದರಬಾದ ಆಸ್ಪತ್ರೆಗೆ ಕರೆದುಕೊಂಡು ಹೋರಟಿದ್ದೆವು, ರಸ್ತೆಯ ಮಧ್ಯದಲ್ಲಿ ತೀರಿಕೊಂಡಿರುತ್ತಾರೆ ಎಂದು ಗೊತ್ತಾಯಿತು. ನಾವು ನನ್ನ ಸಹೋದರನ ದೇಹವನ್ನು ನಮ್ಮ ತಾಂಡಾಕ್ಕೆ ತೆಗೆದುಕೊಂಡು ಬಂದೆವು. ನಂತರ ಬೆಳಿಗ್ಗೆ ಪೋಲಿಸರು ನನ್ನ

ಸಹೋದರನ ಮೃತ ದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಬಂದು ಪಂಚನಾಮೆ ಜರುಗಿಸಿ ಪೋಸ್ಟ ಮಾರ್ಟಮ ಜರುಗಿಸಿರುತ್ತಾರೆ.

ನನ್ನ ಸಹೋದರನಿಗೆ ಅಪಘಾತಪಡಿಸಿದ್ದು ಒಂದು ಟ್ಯಾಂಕರ ಎಂದು ಚಾಸಾ-13 ರವರು ನನಗೆ ಮತ್ತು ನನ್ನ ತಂದೆಯವರಿಗೆ ಕರೆ ಮಾಡಿ ತಿಳಿಸಿದರು. ನಂತರ ಪೋಲಿಸರು ದಿ.23.03.2016 ರಂದು ನನ್ನನ್ನು ಪೋಲಿಸ್ ಠಾಣೆಗೆ ಕರೆದು ಟ್ಯಾಂಕರ ಮತ್ತು ಅದರ ಚಾಲಕನನ್ನು ಪೊಲಿಸ್ ಠಾಣೆಯಲ್ಲಿ ತೋರಿಸಿರುತ್ತಾರೆ. ಸದರಿ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಶಕಾಪೂರ ಬ್ರಿಡ್ಜ ಮಧ್ಯದ ಎಡಬದಿಯಲ್ಲಿ ನನ್ನ ಸಹೋದರ ಮೋಟರ ಸೈಕಲನ್ನು ನಿಲ್ಲಿಸಿ ಪೋನಿನಲ್ಲಿ ಮಾತನಾಡುತ್ತಿರುವಾಗ ಟ್ಯಾಂಕರ ಚಾಲಕನ್ನು ಅತಿ ಜೋರಾಗಿ ನಿರ್ಲಕ್ಷತನದಿಂದ ಓಡಿಸಿಕೊಂಡು ಬಂದು ಅಪಘಾತಪಡಿಸಿದ್ದಾನೆ ಎಂದು ಚಾಸಾ-೧೩ ರವರು ಚಾಸಾ-೧ ರವರಿಗೆ ತಿಳಿಸಿದರು ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಎಸ್.ಎನ್. ವಕೀಲರಿಂದ**

ನನ್ನ ತಾಯಿ ಮತ್ತು ನನ್ನ ಸಹೋದರನ ಹೆಂಡತಿ ಅಪಘಾತ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ನನ್ನ ತಾಯಿ ಸಲ್ಲಿಸಿರುವುದಿಲ್ಲ, ನನ್ನ ಸಹೋದರನ ಹೆಂಡತಿ ಸಲ್ಲಿಸಿರಬಹುದು ಎಂದು ನುಡಿಯುತ್ತಾರೆ. ಸದರಿ ಅರ್ಜಿಯು ಸಹ ಕೂಡ ಆದೇಶವಾಗಿದೆ, ಪರಿಹಾರವೂ ಸಹ ಕೂಡ ಬಂದಿದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-೯ ರವರು ಈಗ ನಮ್ಮ ತಾಂಡಾದಲ್ಲೇ ಇರುತ್ತಾರೆ ಎಂದರೆ ಸರಿ ಅಲ್ಲ. ಪರಿಹಾರ ಪಡೆದುಕೊಳ್ಳುವುದಕ್ಕೋಸ್ಕರ ಚಾಸಾ-೯ ಮತ್ತು ೧೧ ರವರ ನಡುವೆ ಜಗಳವಾಗಿರುತ್ತದೆ ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ೨೦೧೬ ರಲ್ಲಿ ಹಳೇ ಬ್ರಿಡ್ಜನಲ್ಲಿ ಮಾತ್ರ ವಾಹನಗಳು ಓಡಾಡುತ್ತಿದ್ದವು, ಹೊಸ ಬ್ರಿಡ್ಜನಲ್ಲಿ ಓಡಾಡುತ್ತಿರಲಿಲ್ಲ ಎಂಧರೆ ಸರಿ. ಸದರಿ ಬ್ರಿಡ್ಜನಲ್ಲಿ ವಾಹನಗಳನ್ನು ನಿಲ್ಲಿಸಲು ಪಾರ್ಕಿಂಗ್ ಏರಿಯಾ ಇರುವುದಿಲ್ಲ ಎಂದರೆ ಸರಿ ಅಲ್ಲ. ಪಾರ್ಕಿಂಗ ಏರಿಯಾ ಇರದಿದ್ದರೂ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಚಾಸಾ-೧೩ ರವರು ಅಲ್ಲಿ ಇರಲಿಲ್ಲ. ಅಪಘಾತವಾದ ೪ ದಿನಗಳ ನಂತರ ನಾನು ಚಾಸಾ-೧೩ ರವರನ್ನು ಭೇಟಿ ಆಗಿರುತ್ತೇನೆ. ಆನಂತರ ಆಗಾಗ ಭೇಟಿ ಆಗಿರುತ್ತೇವೆ. ಚಾಸಾ-೧೩ ರವರನ್ನು ನಾವು ಅವರ ಮನೆಗೆ ಹೋಗಿ ಭೇಟಿ ಆಗಿರುತ್ತೇವೆ.

ದಿ.23.03.2016 ರಂದು ನನ್ನನ್ನು ಪೋಲಿಸ್ ಠಾಣೆಗೆ ಕರೆದು ಟ್ಯಾಂಕರ ಮತ್ತು ಅದರ ಚಾಲಕನನ್ನು ಪೊಲಿಸ್ ಠಾಣೆಯಲ್ಲಿ ತೋರಿಸಿರುತ್ತಾರೆ ಎಂದು ಹೇಳುತ್ತಿರಲ್ಲ, ಸದರಿ ಟ್ಯಾಂಕರನ ನಂಬರ್ ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಎಂ.ಹೆಚ್.12-9635 ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಾಹನ ಸಂಖ್ಯೆ ಮತ್ತು ಆರೋಪಿ ಯಾರು ಎಂದು ನಮಗೆ ಪೋಲಿಸರು ಹೇಳಿದ ನಂತರ ನಮಗೆ

ಗೊತ್ತಾಯಿತು ಎಂಧರೆ ಸರಿ, ಸಾಕ್ಷಿ ಮುಂದುವರೆದು ಚಾಸಾ-13 ರವರು ಟ್ಯಾಂಕರ ವಾಹನ ಅಪಘಾತ ಪಡಿಸಿದೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೊಪಿಯ ಹೆಸರು ಅವನು ಎಲ್ಲಿಯವನು ಎಂದು ಪೋಲಿಸರೇ ನಮಗೆ ಹೇಳಿದ ಮೇಲೆ ನಮಗೆ ಗೊತ್ತಾಯಿತು ಎಂದರೆ ಸರಿ.

ನನ್ನ ಸಹೋದರನ ಜೊತೆ ತಮ್ಮ ತಾಂಡಾದಿಂದ ಬೇರೆ ಯಾರೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಚಾಸಾ-13 ರವರ ಮನೆಗೆ ಮತ್ತು ಶಕಾಪೂರ ಬ್ರಿಡ್ಜನಿಂದ 1 ರಿಂದ 1 ವರೆ ಕಿ.ಮೀ. ಅಂತರವಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾವು ಚಾಸಾ-13 ರವರನ್ನು ಕೇಳಿದಾಗ ಅವರು ಅವರ ಹೊಲದಲ್ಲಿ ಇದ್ದರು, ಅಪಘಾತದ ಸಪ್ಪಳ ಕೇಳಿ ಹೋಗಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-13 ರವರ ಜಮೀನು ಶಕಾಪೂರ ಬ್ರಿಡ್ಜ ಹತ್ತಿರ ಇರುವುದಿಲ್ಲ ಮತ್ತು ಅವರ ಸಮಾಜದವರ ಯಾವ ಜಮೀನು ಸಹ ಕೂಡ ಇರುವುದಿಲ್ಲ ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಜಿಡಗಾ ಗ್ರಾಮಕ್ಕೆ ಹೋಗು ಕಮಾನಿನ ಹತ್ತಿರ ಎಡಬದಿ ಮತ್ತು ಬಲಬದಿಯಲ್ಲಿ ಚಾಸಾ-13 ರವರ ಮತ್ತು ಅವರ ಸಮಾಜದವರ ಹೊಲಗಳು ಇರುತ್ತವೆ ಎಂದರೆ ಸಾಕ್ಷಿಯು ಅಲ್ಲಿಯೂ ಇರುತ್ತವೆ, ಶಕಾಪೂರ ಹಳ್ಳದ ಬಳಿಯೂ ಇರುತ್ತವೆ ಎಂದು ನುಡಿಯುತ್ತಾರೆ.

ಚಾಸಾ-13 ರವರು ಚಾಸಾ-೧ ರವರಿಗೆ ಕರೆ ಮಾಡಿ ಹೇಳಿದರು ಎಂದು ಹೇಳುತ್ತಿರಲ್ಲ, ಚಾಸಾ-13 ರವರಿಗೆ ಚಾಸಾ-೧ ರವರ ನಂಬರ್ ಗೊತ್ತಿತ್ತಾ ಎಂಧರೆ ಸಾಕ್ಷಿಯು ಚಾಸಾ-13 ರವರು ನನ್ನ ಸಹೋದರನ ಪೋನಿನಿಂದ ಚಾಸಾ-೧ ರವರ ಮೊಬೈಲಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತ ಯಾರು ಪಡಿಸಿದ್ದಾರೆ, ಹೇಗೆ ಪಡಿಸಿದ್ದಾರೆ, ಅಪಘಾತಪಡಿಸಿದವನ ಊರು ಯಾವುದು ಎಂದು ಮೊದಲು ಗೊತ್ತಿರಲಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಪೋಲಿಸರು ಹೇಳಿದ ನಂತರ ಗೊತ್ತಾಯಿತು ಎಂದು ನುಡಿಯುತ್ತಾರೆ. ಅಪಘಾತಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂಧರೆ ಸರಿ ಅಲ್ಲ. ಪೋಲಿಸರು ಅಪಘಾತ ಯಾರು ಪಡಿಸಿದ್ದಾರೆ ಅವರನ್ನು ಹಿಡಿದಿರುವುದಿಲ್ಲ, ಅಪಘಾತವನ್ನು ಪಡಿಸದೇ ಇದ್ದರೂ ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲದಿದ್ದರೂ ಆರೋಪಿಯ ಹೆಸರನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪರಿಹಾರ ಪಡೆದುಕೊಳ್ಳುವುದಕ್ಕೋಸ್ಕರ ಖೊಟ್ಟಿಯಾಗಿ ಆರೊಪಿಯನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತಾರೆ ಎಂಧರೆ ಸರಿ ಅಲ್ಲ. ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಈ ಪ್ರಕರಣ ಕುರಿತು ಹೇಳಿಕೆ ನೀಡುತ್ತಿದ್ದೇನೆ, ಬೇರೆ ಎಲ್ಲಿಯೂ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ಚಾಸಾ-1 ರವರು ಮೃತ ರಮೇಶನ ಹೆಂಡತಿ ಮತ್ತು ಚಾಸಾ-11 ರವರಿಗೆ ಪರಿಹಾರ ಸಿಗಲಿ ಎಂದು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಪೋಲಿಸರು ಆರೋಪಿಯನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತಾರೆ, ಅದಕ್ಕೆ ಅನುಕೂಲವಾಗಲಿ ಎಂಧು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ